1	2	3	4
25	ರಾಮನಗರ	–	–
26	ಶಿವಮೊಗ್ಗ	4	5
27	ತುಮಕೂರು	3	2
28	ಉಡುಪಿ	–	11
29	ಉತ್ತರ ಕನ್ನಡ	–	7
30	ಯಾದಗಿರಿ	–	–
	ಒಟ್ಟು	215	599

ಬೆಳ್ತಂಗಡಿಯಲ್ಲಿರುವ ಜಮಲಾಬಾದ್ ಕೋಟೆ ಏರಲು ವಿಧಿಸಿರುವ ಶುಲ್ಕ

107(164) ಶ್ರೀ ವಸಂಗಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿಯಲ್ಲಿರುವ ಗಡಾಯಿಕಲ್ಲು (ಜಮಲಾಬಾದ್) ಕೋಟೆ ಹತ್ತುವ ಮಕ್ಕಳಿಗೆ 20/– ರೂ. ವಯಸ್ಕರಿಗೆ 40/– ರೂ. ಇದ್ದ ಶುಲ್ಕವನ್ನು ಏಕಾಏಕಿ 5 ಪಟ್ಟು ಹೆಚ್ಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ಹಾಗಿದ್ದಲ್ಲಿ, ಶುಲ್ಕ ಏರಿಕೆಯನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ;

ಇ) ಪ್ರವಾಸಿಗರಿಗೆ ಯಾವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ;

ಈ) ಶುಲ್ಕವನ್ನು ಅವೈಜ್ಞಾನಿಕವಾಗಿ ಹೆಚ್ಚಿಸಿರುವುದರಿಂದ ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಬಹುದೆಂಬ ಕಲ್ಪನೆ ಸರ್ಕಾರಕ್ಕೆ ಇದೆಯೇ;

ಉ) ಮೂಲಭೂತ ಸೌಕರ್ಯಗಳಿಲ್ಲದ, ಚಾರಣಿಗರಿಗೆ ಬಹುಪ್ರಿಯವಾದ ಈ ಕೋಟೆಯನ್ನು ಉಚಿತವಾಗಿ ಹತ್ತಲು ಅವಕಾಶ ನೀಡಿದಲ್ಲಿ ಸರ್ಕಾರಕ್ಕೆ ಉಂಟಾಗುವ ತೊಂದರೆಗಳೇನು?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಸಚಿವರು)

ಅ) ಹೌದು.

ಆ) ಹಳೆ ದರಗಳು ಕಳೆದ ನಾಲ್ಕು ವರ್ಷಗಳ ಹಿಂದೆ ದಿನಾಂಕ 10–4–2007ರಿಂದ ಅನ್ವಯವಾಗುವಂತೆ ನಿಗದಿಪಡಿಸಲಾಗಿತ್ತು. 2007ರಲ್ಲಿ ಇದ್ದ ಇಂಧನದ ಬೆಲೆಯು ಪ್ರಸ್ತುತ ಬಹಳಷ್ಟು ತುಟ್ಟಿಯಾಗಿರುತ್ತದೆ. ಇದರಿಂದಾಗಿ ರಾಷ್ಟ್ರೀಯ ಉದ್ಯಾನವನ ಹಾಗೂ ಅಭಯಾರಣ್ಯಗಳಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ನಡೆಸುವುದು ದುಸ್ತರವಾಗಿರುವುದರಿಂದ ದಿನಾಂಕ 1–2–2011ರಿಂದ ಜಾರಿಗೆ ಬರುವಂತೆ ದರವನ್ನು ಪರಿಷ್ಕರಿಸಲಾಗಿದೆ. ಈ ರೀತಿ ಬರುವ ರಾಜಸ್ವವನ್ನು ರಾಷ್ಟ್ರೀಯ ಉದ್ಯಾನವನದ ಅಂಚಿನಲ್ಲಿ ಬರುವ ಗ್ರಾಮಗಳಲ್ಲಿ ಮಾನವ–ಪ್ರಾಣಿ ಸಂಘರ್ಷಗಳನ್ನು ನಿಯಂತ್ರಿಸುವ ಕಾಮಗಾರಿ ಗಳಿಗೆ ಬಳಸಿಕೊಳ್ಳಲಾಗುತ್ತದೆ.

ಇ) ಪ್ರವಾಸಿಗರಿಗೆ ನೀರಿನ ಸೌಕರ್ಯ, ಶೌಚಾಲಯ ಮತ್ತು ವಿಶ್ರಾಂತಿಗಾಗಿ ಪರಗೋಲ ನಿರ್ಮಿಸಲಾಗಿರುತ್ತದೆ.

ಈ) ಶುಲ್ಕವನ್ನು ಅವೈಜ್ಞಾನಿಕವಾಗಿ ಹೆಚ್ಚಿಸಿರುವುದಿಲ್ಲ.

ಉ) ಬೆಳ್ತಂಗಡಿಯಲ್ಲಿರುವ ಗಡಾಯಿಕಲ್ಲು (ಜಮಲಾಬಾದ್) ಕೋಟೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವ್ಯಾಪ್ತಿಯಲ್ಲಿ ಇರುತ್ತದೆ. ಶುಲ್ಕ ನಿಗದಿಪಡಿಸಿದಲ್ಲಿ ಪ್ರವಾಸೋದ್ಯಮ ಚಟುವಟಿಕೆಯ ಒತ್ತಡವನ್ನು ತಡೆಯ ಬಹುದಾಗಿರುತ್ತದೆ. ಉಚಿತವಾಗಿ ಅವಕಾಶ ನೀಡಿದ್ದಲ್ಲಿ ಪ್ರವಾಸೋದ್ಯಮ ಚಟುವಟಿಕೆ ಒತ್ತಡವು ಹೆಚ್ಚಾಗಿ ವನ್ಯಪ್ರಾಣಿಗಳ ಚಲನ–ವಲನಕ್ಕೆ ಹಾಗೂ ಪರಿಸರಕ್ಕೆ ತುಂಬಾ ಹಾನಿ ಉಂಟಾಗುತ್ತದೆ.

ನೋಂದಣಿಯಾದ ದಸ್ತಾವೇಜುಗಳಿಗೆ ಬೆಂಗಳೂರಿನ ಕಾವೇರಿ ಭವನದಲ್ಲಿರುವ ಸಂಬಂಧಪಟ್ಟ ಶಾಖೆಯಿಂದ XML ನೀಡುವುದು

108(165) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೋಂದಣಿಯಾದ ದಸ್ತಾವೇಜುಗಳಿಗೆ ಬೆಂಗಳೂರಿನ ಕಾವೇರಿ ಭವನದಲ್ಲಿರುವ ಸಂಬಂಧಪಟ್ಟ ಶಾಖೆಯಿಂದ XML ಆದೇಶ ನೀಡಿದ ನಂತರ ಪಹಣಿ ಪತ್ರಿಕೆಯಲ್ಲಿ ದಾಖಲಿಸಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆಯೇ;

ಆ) ಕಾವೇರಿ ಭವನದಲ್ಲಿರುವ ಸಂಬಂಧಪಟ್ಟ ಶಾಖೆಯಿಂದ XML ನೀಡಲು ತಡವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;